# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1083(1278) |
| ಸದಸ್ಯರ ಹೆಸರು: | ಶ್ರೀ ಮಧು ಜಿ ಮಾದೇಗೌಡ |
| ಉತ್ತರಿಸುವ ಸಚಿವರು: | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ: | 17.12.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಇರುವ ಖಾತಾ ಜಮೀನುಗಳ ಸಂಖ್ಯೆ ಎಷ್ಟು; ಹಾಗೂ ಫ್ರೂಟ್ ಐಡಿ ಹೊಂದಿರುವ ಮತ್ತು ಮೃತ ಹೆಸರಿನಲ್ಲಿರುವ ಪಹಣಿಗಳ ಸಂಖ್ಯೆ ಎಷ್ಟು; (ಆಯಾಯ ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು) | ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| (ಆ) | ಈ ಮೇಲ್ಕಾಣಿಸಿದ ಜಿಲ್ಲೆಗಳಲ್ಲಿ 'ಇ-ಪೌತಿ ಖಾತೆ' ಪ್ರಕ್ರಿಯೆ ಆರಂಭಗೊಂಡಿದೆಯೇ; ಇ-ಪೌತಿ ಖಾತೆ ಉದ್ದೇಶ ಏನು; ಇದು ರೈತರಿಗೆ ಹೇಗೆ ಅನುಕೂಲವಾಗಲಿದೆ; ರೈತರು ಯಾವ್ಯಾವ ದಾಖಲೆಗಳನ್ನು ಒದಗಿಸಬೇಕಿರುತ್ತದೆ; (ಸಂಪೂರ್ಣ ವಿವರ ನೀಡುವುದು) | ಹೌದು. ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ, ಈಗಾಗಲೇ ಇ-ಪೌತಿ ಖಾತೆ ಪ್ರಕ್ರಿಯೆ ಆರಂಭಗೊಂಡಿರುತ್ತದೆ.<br><br>ಮೃತರ ಹೆಸರಿನಲ್ಲಿರುವ ಜಮೀನುಗಳನ್ನು ಅವರ ವಾರಸುದಾರರ ಹೆಸರಿಗೆ ತ್ವರಿತವಾಗಿ ಖಾತೆ ಮಾಡುವ ಉದ್ದೇಶದಿಂದ ಇ-ಪೌತಿ ಖಾತೆ ಜಾರಿಗೊಳಿಸಿದ್ದು, ಇ-ಪೌತಿ ಖಾತೆ ಪ್ರಕ್ರಿಯೆಯಿಂದ ರೈತರ ಮನೆ ಬಾಗಿಲಿಗೆ ತೆರಳಿ ತ್ವರಿತವಾಗಿ ಯಾವುದೇ ವಿಳಂಬಕ್ಕೆ ಅಸ್ಪದ ನೀಡದೆ ಪೌತಿ ಖಾತೆ ಮಾಡಿಕೊಡಲಾಗುತ್ತಿದೆ. ಇದರಿಂದ ರೈತರಿಗೆ ತಮ್ಮ ಪೌತಿ ಖಾತೆ ಬದಲಾವಣೆ ಮಾಡಿಕೊಳ್ಳಲು ತುಂಬಾ ಅನುಕೂಲವಾಗಿರುತ್ತದೆ.<br><br>ಸದರಿ ಪೌತಿ ಖಾತೆ ಮಾಡಿಕೊಳ್ಳಲು ವಂಶವೃಕ್ಷ, ಚಾಲ್ತಿ ಸಾಲಿನ ಆರ್.ಟಿ.ಸಿ, ವಾರಸುದಾರರ ಆಧಾರ್ ಕಾರ್ಡ್ ಹಾಗೂ ಪೌತಿಯಾಗಿರುವವರ ಮರಣ ಪ್ರಮಾಣ ಪತ್ರ ಒದಗಿಸಬೇಕಾಗಿರುತ್ತದೆ. |
| (ಇ) | ಏಕ ಮಾಲೀಕತ್ವ ಮತ್ತು ಜಂಟಿ ಮಾಲೀಕತ್ವದಲ್ಲಿ ಇರುವ ಇ-ಪೌತಿ ಖಾತೆಗಳ ಸಂಖ್ಯೆ ಎಷ್ಟು; (ಆಯಾಯ ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು) | ಏಕ ಮಾಲೀಕತ್ವ ಮತ್ತು ಜಂಟಿ ಮಾಲೀಕತ್ವದಲ್ಲಿ ಇರುವ ಇ-ಪೌತಿ ಖಾತೆಗಳ ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಈ) | ಬಹು ವಾರಸುದಾರರುಗಳಿರುವಂತಹ ಪ್ರಕರಣಗಳಲ್ಲಿ ಇ-ಪೌತಿ ಖಾತೆ ಪ್ರಕ್ರಿಯೆಯು ಹೇಗೆ ಕೈಗೊಳ್ಳಲಾಗುತ್ತದೆ; (ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019 (ಇ), ದಿನಾಂಕ: 17.10.2020 ರನ್ವಯ ಬಹು ವಾರಸುದಾರರುಗಳಿರುವಂತಹ ಪ್ರಕರಣಗಳಲ್ಲಿ ಎಲ್ಲಾ ಉತ್ತರಾಧಿಕಾರಿಗಳು ಯಾರಾದರೂ ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚಿನವರ ಹೆಸರಿನಲ್ಲಿ ಖಾತೆ ಮಾಡಲು ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಅಫಿಡವಿಟ್ ಮೂಲಕ ಪ್ರಮಾಣೀಕರಿಸಿದಲ್ಲಿ ಅಫಿಡವಿಟ್‌ನಲ್ಲಿ ಖಾತೆ ಮಾಡಲು ಒಪ್ಪಿರುವವರ ಹೆಸರಿಗೆ ಮಾತ್ರವೇ ಮ್ಯುಟೇಷನ್ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. |
| (ಉ) | ಕ್ಷೇತ್ರ ಮಟ್ಟದಲ್ಲಿ 'ಇ-ಪೌತಿ ಖಾತೆ' ಪ್ರಕ್ರಿಯೆ ಕೈಗೊಳ್ಳುವ ಸಂದರ್ಭದಲ್ಲಿ ರೈತರು ಒಪ್ಪದಿದ್ದಾಗ (ಭೂಮಿಗೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯ, ಕುಟುಂಬದ ವಿವಾದ ಇನ್ನಿತರೆ ಸಂದರ್ಭಗಳಲ್ಲಿ) ಅಂತಹವುಗಳನ್ನು ಗುರುತಿಸಲು 'ಇ-ಪೌತಿ ಖಾತಾ ಆಪ್' ಅವಕಾಶ ಮಾಡಿಕೊಡಲಾಗಿದೆಯೇ; ಇಲ್ಲದಿದ್ದಲ್ಲಿ, ಈ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು; | ಪ್ರಸ್ತುತ ಕ್ಷೇತ್ರ ಮಟ್ಟದಲ್ಲಿ 'ಇ-ಪೌತಿ ಖಾತೆ' ಪ್ರಕ್ರಿಯೆ ಕೈಗೊಳ್ಳುವ ಸಂದರ್ಭದಲ್ಲಿ ರೈತರು ಒಪ್ಪದಿದ್ದಾಗ (ಭೂಮಿಗೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯ, ಕುಟುಂಬದ ವಿವಾದ ಇನ್ನಿತರೆ ಸಂದರ್ಭಗಳಲ್ಲಿ) ಅಂತಹವುಗಳನ್ನು ಗುರುತಿಸಲು 'ಇ-ಪೌತಿ ಖಾತಾ ಆಪ್' ನಲ್ಲಿ ಅವಕಾಶವಿರುವುದಿಲ್ಲ. ಈ ಕುರಿತು ಪ್ರಸ್ತುತ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| (ಊ) | ರಾಜ್ಯದಲ್ಲಿ ಪೌತಿ/ ವಾರಸಾ ಖಾತೆ ಆಂದೋಲನವನ್ನು ನಡೆಸುತ್ತಾ ಬಂದಿದ್ದರೂ ನಿರೀಕ್ಷಿತ ಪ್ರಗತಿ ಆಗದೇ ವಾರಸುದಾರರಿಗೆ ತೀವ್ರ ಅನಾನುಕೂಲ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪೌತಿ ಖಾತೆಗಳನ್ನು ತ್ವರಿತವಾಗಿ ಮಾಡಿಕೊಡುವ ನಿಟ್ಟಿನಲ್ಲಿ ತೆಗೆದುಕೊಂಡಿರುವ ಕ್ರಮಗಳೇನು? | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್ ಎಂ 2019(ಇ), ದಿನಾಂಕ:17.10.2020 ಮತ್ತು ತಿದ್ದುಪಡಿ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019(ಇ), ದಿನಾಂಕ: 10.01.2024 ರಂತೆ ಪೌತಿ / ವಾರಸಾ ಖಾತೆ ಆಂದೋಲನವನ್ನು ನಡೆಸಲು ಸರ್ಕಾರದ ವತಿಯಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಅದರಂತೆ ಪೌತಿ ಖಾತೆಗಾಗಿ ಅರ್ಜಿಗಳನ್ನು ಸ್ವೀಕರಿಸಲು ಭೂಮಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಪೌತಿ ಖಾತೆಗೆ ಅರ್ಜಿ ಸ್ವೀಕರಿಸಲು ಬೇಕಾದ ದಾಖಲೆಗಳನ್ನು ಕೂಡ ಸರಳೀಕರಣಗೊಳಿಸಲಾಗಿದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಂಇ 95 ಎಂಆರ್‌ಆರ್ 2025, ದಿನಾಂಕ: 21.04.2025 ರಂತೆ ಮರಣ ಹೊಂದಿದ ಖಾತೆದಾರರ ವಾರಸುದಾರರ ಹೆಸರಿಗೆ ಖಾತಾ ಪಹಣಿ ಇಂಡೀಕರಣ ಮಾಡುವ ನಿಟ್ಟಿನಲ್ಲಿ ಕಂದಾಯ ಇಲಾಖೆಯ ಮೂಲಕ ಇ-ಪೌತಿ ತಂತ್ರಾಂಶವನ್ನು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ನೀಡಲಾಗಿರುತ್ತದೆ. ಸದರಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಮರಣ ಹೊಂದಿದ ವಾರಸುದಾರರ e-KYC ಪಡೆಯುವ ಮುಖಾಂತರ ವಂಶವೃಕ್ಷ ಹಾಗೂ ಮರಣ ಪ್ರಮಾಣ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಪಡೆದು ಪೌತಿ ಖಾತೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಇ-ಪೌತಿ ತಂತ್ರಾಂಶವನ್ನು ಜುಲೈ 2025ರಿಂದ ರಾಜ್ಯದಾದ್ಯಂತ ಅನುಷ್ಠಾನಗೊಳಿಸಲಾಗಿದ್ದು, ಇ-ಪೌತಿ ತಂತ್ರಾಂಶದ ಮೂಲಕವೇ ಪೌತಿ ಖಾತೆ ಮಾಡಲು ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ತ್ವರಿತವಾಗಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಇ-ಪೌತಿ MOBILE APP ಜೊತೆಗೆ ಇ-ಪೌತಿ ವೆಬ್ ಅಪ್ಲಿಕೇಷನ್ ಸಹ ನೀಡಲಾಗಿರುತ್ತದೆ. ಈ ತಂತ್ರಾಂಶ ಬಳಕೆಯಲ್ಲಿ ಸಮಸ್ಯೆಗಳು ಕಂಡುಬಂದಲ್ಲಿ ಅವುಗಳನ್ನು ಭೂಮಿ ಉಸ್ತುವಾರಿ ಕೋಶದ ತಾಂತ್ರಿಕ ತಂಡವು ಪರಿಹರಿಸುತ್ತದೆ. |

**ಸಂಖ್ಯೆ: ಕಂಇ 199 ಟಿಆರ್‌ಎಂ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1083 [1278]

## ಅನುಬಂಧ-I

| ಕ್ರ.ಸ. | ಜಿಲ್ಲೆ | ವರದಿ | | | |
|---|---|---|---|---|---|
| 1 | ಚಾಮರಾಜನಗರ | ತಾಲ್ಲೂಕು | ಖಾತಾ ಜಮೀನುಗಳ ಸಂಖ್ಯೆ | ಫ್ರೂಟ್ ಐಡಿ ಹೊಂದಿರುವ ಪಹಣಿಗಳ ಸಂಖ್ಯೆ | ಮೃತರ ಹೆಸರಿನಲ್ಲಿರುವ ಪಹಣಿಗಳ ಸಂಖ್ಯೆ |
| | | ಚಾಮರಾಜನಗರ | 149701 | 78905 | 39092 |
| | | ಗುಂಡ್ಲುಪೇಟೆ | 99754 | 59046 | 19797 |
| | | ಯಳಂದೂರು | 58224 | 14471 | 14736 |
| | | ಹನೂರು | 70633 | 36848 | 16975 |
| | | ಕೊಳ್ಳೇಗಾರ | 59318 | 27255 | 20505 |
| | | ಒಟ್ಟು | 4,37,630 | 2,16,525 | 1,11,105 |
| 2 | ಹಾಸನ | ತಾಲ್ಲೂಕು | ಖಾತಾ ಜಮೀನುಗಳ ಸಂಖ್ಯೆ | ಫ್ರೂಟ್ ಐಡಿ ಹೊಂದಿರುವ ಪಹಣಿಗಳ ಸಂಖ್ಯೆ | ಮೃತರ ಹೆಸರಿನಲ್ಲಿರುವ ಪಹಣಿಗಳ ಸಂಖ್ಯೆ |
| | | ಆಲೂರು | 90540 | 78145 | 12395 |
| | | ಅರಸೀಕೆರೆ | 294567 | 186265 | 25246 |
| | | ಅರಕಲಗೂಡು | 198528 | 64800 | 8426 |
| | | ಬೇಲೂರು | 21293 | 21293 | 109555 |
| | | ಚನ್ನರಾಯಪಟ್ಟಣ | 64276 | 64276 | 32182 |
| | | ಹಾಸನ | 346567 | 259925 | 44985 |
| | | ಹೊಳೇನರಸೀಪುರ | 220968 | 54591 | 29863 |
| | | ಸಕಲೇಶಪುರ | 50520 | 9830 | 9830 |
| | | ಒಟ್ಟು | 1287259 | 739125 | 173882 |
| 3 | ಮಂಡ್ಯ | ತಾಲ್ಲೂಕು | ಒಟ್ಟು ಖಾತಾ ಸಂಖ್ಯೆ | ಫ್ರೂಟ್ ಐಡಿ ಹೊಂದಿರುವ ಪಹಣಿಗಳ ಸಂಖ್ಯೆ | ಮೃತರ ಹೆಸರಿನಲ್ಲಿರುವ ಪಹಣಿಗಳ ಸಂಖ್ಯೆ |
| | | ಮಂಡ್ಯ | 239107 | 204842 | 52801 |
| | | ಮದ್ದೂರು | 209621 | 185833 | 45461 |
| | | ಮಳವಳ್ಳಿ | 188618 | 163841 | 35544 |
| | | ಪಾಂಡವಪುರ | 199982 | 145610 | 29376 |
| | | ಶ್ರೀರಂಗಪಟ್ಟಣ | 85382 | 31140 | 54242 |
| | | ನಾಗಮಂಗಲ | 336694 | 239934 | 96760 |
| | | ಕೆ.ಆರ್ ಪೇಟೆ | 378624 | 50956 | 46964 |
| | | ಒಟ್ಟು | 1638028 | 1022156 | 361148 |
| 4 | ಮೈಸೂರು | ತಾಲ್ಲೂಕು | ಖಾತಾ ಜಮೀನುಗಳ ಸಂಖ್ಯೆ | ಫ್ರೂಟ್ ಐಡಿ ಹೊಂದಿರುವ ಮತ್ತು ಮೃತರ ಹೆಸರಿನಲ್ಲಿರುವ ಪಹಣಿಗಳ ಸಂಖ್ಯೆ | |
| | | ಮೈಸೂರು | 130678 | 67163 | |
| | | ನಂಜನಗೂಡು | 31169 | 755 | |
| | | ಟಿ ನರಸೀಪುರ | 199474 | 162056 | |
| | | ಹುಣಸೂರು | 108659 | 20894 | |
| | | ಪಿರಿಯಾಪಟ್ಟಣ | 130873 | 22742 | |
| | | ಹೆಚ್ ಡಿ ಕೋಟೆ | 46814 | 1092 | |
| | | ಸರಗೂರು | 20534 | 6596 | |
| | | ಕೆ ಆರ್ ನಗರ | 53913 | 42825 | |
| | | ಸಾಲಿಗ್ರಾಮ | 53344 | 41191 | |
| | | **ಒಟ್ಟು** | **7,28,644** | **341480** | |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1083 (1278) ಅನುಬಂಧ-2

| SL NO | DISTRICT | ಏಕ ಮಾಲೀಕತ್ವ ಇ-ಪೌತಿ ಖಾತೆಗಳ ಸಂಖ್ಯೆ | ಜಂಟಿ ಮಾಲೀಕತ್ವ ಇ-ಪೌತಿ ಖಾತೆಗಳ ಸಂಖ್ಯೆ |
|---|---|---|---|
| 1 | Belgaum | 1872 | 8429 |
| 2 | Bagalkot | 1128 | 3275 |
| 3 | Bijapur | 1994 | 3355 |
| 4 | Gulbarga | 989 | 4058 |
| 5 | Bidar | 671 | 3395 |
| 6 | Raichur | 1073 | 4494 |
| 7 | Koppal | 943 | 4532 |
| 8 | Gadag | 1763 | 3955 |
| 9 | Dharwad | 1418 | 3131 |
| 10 | Uttar Kannada | 1491 | 5522 |
| 11 | Haveri | 1255 | 3868 |
| 12 | Bellary | 1208 | 4127 |
| 13 | Chitradurga | 847 | 4578 |
| 14 | Davanagere | 744 | 3589 |
| 15 | Shimoga | 654 | 2378 |
| 16 | Udupi | 1836 | 12472 |
| 17 | Chikmagalur | 739 | 3227 |
| 18 | Tumkur | 747 | 4457 |
| 19 | Kolar | 311 | 1999 |
| 20 | Bangalore Urban | 440 | 1222 |
| 21 | Bangalore Rural | 301 | 1620 |
| 22 | Mandya | 1734 | 9103 |
| 23 | Hassan | 687 | 2975 |
| 24 | Dakshina Kannada | 1297 | 6853 |
| 25 | Kodagu | 201 | 2554 |
| 26 | Mysore | 1050 | 3819 |
| 27 | Chamarajanagara | 654 | 3563 |
| 28 | Chikballapur | 447 | 2353 |
| 29 | Bangalore South | 543 | 3273 |
| 30 | Yadgir | 1176 | 4397 |
| 31 | Vijayanagara | 1137 | 4828 |
| Total | | 31,350 | 1,31,401 |

*ಭೂಮಿ ತಂತ್ರಾಂಶದಲ್ಲಿ ಲಭ್ಯವಿರುವಂತೆ